**ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ರವರ ನ್ಯಾಯಾಲಯ,**
**ಸಕಲೇಶಪುರ**
**C.C.No.2/2023**

| | | |
|---|---|---|
| **ಹೆಸರುಃ** | **ಮೋಹನ** | **CW-4** |
| **ತಂದೆ/ಗಂಡ ಹೆಸರುಃ** | **ರಾಮೇಗೌಡ** | **PW-3** |
| **ವಯಸ್ಸುಃ** | **60 ವರ್ಷ** | |
| **ವೃತ್ತಿಃ** | **ವ್ಯವಸಾಯ** | |
| **ವಿಳಾಸಃ** | **ಅಚ್ಚನಹಳ್ಳಿ ಗ್ರಾಮ** | **ದಿನಾಂಕಃ 19.01.2026** |

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಮಾಡಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಎ ಪಿ ಪಿ ಯವರಿಂದ.**

ಸಾಕ್ಷಿಯು ಘಟನಾ ಸ್ಥಳದ ಪಂಚನಾಮೆಯನ್ನು ನೋಡಿ ಗುರುತಿಸಿದ್ದು, ಅದನ್ನು ನಿ ಪಿ 3 ಎಂದು, ಸಹಿಯನ್ನು ನಿ ಪಿ 3 ಎ ಎಂದು ಗುರುತಿಸಲಾಯಿತು. 2 ವರ್ಷಗಳ ಹಿಂದೆ ಅಚ್ಚನಹಳ್ಳಿ ಗ್ರಾಮದಲ್ಲಿ ನಾನು ಹೋಗುತ್ತಿದ್ದಾಗ, ಆಗ ಪೊಲೀಸರು ದಾರಿಯಲ್ಲಿ ನನ್ನ ಸಹಿ ಪಡೆದಿರುತ್ತಾರೆ. ಆಗ ಸಮಯ ಮಧ್ಯಾಹ್ನವಾಗಿತ್ತು. ಆ ಸಮಯದಲ್ಲಿ ನನ್ನ ಜೊತೆ ಯಾರು ಇರಲಿಲ್ಲ. ಸಾಕ್ಷಿಯು ಅಮಾನತ್ತು ಪಂಚನಾಮೆಯನ್ನು ನೋಡಿ ಗುರುತಿಸಿದ್ದು, ಅದನ್ನು ನಿ ಪಿ 4 ಎಂದು, ಸಹಿಯನ್ನು ನಿ ಪಿ 4 ಎ ಎಂದು ಗುರುತಿಸಲಾಯಿತು. ನಿ ಪಿ 4 ಕ್ಕೆ ಅದೇ ದಿನ ಅಚ್ಚನಹಳ್ಳಿ ಗ್ರಾಮದಲ್ಲಿ ಅದೇ ಸಮಯಕ್ಕೆ ಸಹಿ ಮಾಡಿರುತ್ತೇನೆ. ಆ ಸಮಯದಲ್ಲಿ ನನ್ನ ಜೊತೆ ಯಾರು ಇರಲಿಲ್ಲ. ಸಾಕ್ಷಿಯು ಅಮಾನತ್ತು ಪಂಚನಾಮೆ ಸಮಯದ ಫೋಟೋವನ್ನು ನೋಡಿ ಗುರುತಿಸಿರುತ್ತಾರೆ. ಫೋಟೋದಲ್ಲಿ 1 ನೇ ಆರೋಪಿ ಮತ್ತು ಚಾಸಾ 6 ರವರು ಇರುತ್ತಾರೆ. ಫೋಟೋವನ್ನು ಸಕಲೇಶಪುರ ಠಾಣೆಯಲ್ಲಿ ತೆಗೆದಿರುತ್ತಾರೆ. 1 ನೇ ಆರೋಪಿ ಕೈಯಲ್ಲಿ ಬಂದೂಕು ಇರುತ್ತದೆ. ಸದರಿ ಬಂದೂಕನ್ನು ನೋಡಿದರೆ ಗುರುತಿಸಲು ಆಗುವುದಿಲ್ಲ.

**(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಸ ಸ ಅ ಅವರು ಅನುಮತಿ ಕೋರಿದ್ದು ಅನುಮತಿ ನೀಡಲಾಯಿತು)**

**ಪಾಟೀ ಸವಾಲುಃ ಮಾನ್ಯ ಎ ಪಿ ಪಿ ಯವರಿಂದ.**

ದಿಃ 22.03.2022 ರಂದು ಬೆಳಿಗ್ಗೆ 10 ರಿಂದ 11 ರ ಸಮಯದಲ್ಲಿ ಅಚ್ಚನಹಳ್ಳಿ ಗ್ರಾಮದ ಕಾಫಿ ತೋಟದಲ್ಲಿ ನಾನು ಮತ್ತು ಚಾಸಾ 5 ರವರ ಸಮಕ್ಷಮ ಘಟನಾ ಸ್ಥಳದಲ್ಲಿ ಪಂಚನಾಮೆ ಮಾಡಿ ನನ್ನ ಮತ್ತು ಚಾಸಾ 5 ರವರ ಸಹಿ ಪಡೆದಿರುತ್ತಾರೆಂದರೆ ಸರಿಯಲ್ಲ. ದಿಃ 29.03.2022 ರಲ್ಲಿ ಬೆ 10 ರಿಂದ 11 ರ ಸಮಯದಲ್ಲಿ ಸಕಲೇಶಪುರ ಗ್ರಾಮಾಂತರ ಠಾಣೆಯಲ್ಲಿ 1 ನೇ ಆರೋಪಿ ಹಾಜರುಪಡಿಸಿದಂತೆ ಬಂದೂಕನ್ನು ನನ್ನ ಸಮಕ್ಷಮ ವಶಪಡಿಸಿಕೊಂಡು ನಿ ಪಿ 4 ರಂತೆ ಪಂಚನಾಮೆ ಮಾಡಿರುತ್ತಾರೆಂದರೆ ಸರಿಯಲ್ಲ. ಅದೇ ಸಮಯದಲ್ಲಿ ನನ್ನ ಪೋಟೊ ತೆಗೆದಿರುತ್ತಾರೆಂದರೆ ಸರಿಯಲ್ಲ. ನನ್ನ ಸಮಕ್ಷಮ ನಿ ಪಿ 3 ಮತ್ತು 4 ರಂತೆ ಪಂಚನಾಮೆ ಮಾಡಿದ್ದರೂ ಸಹ ಮತ್ತು ಪೋಟೋ ತೆಗೆದಿದ್ದರೂ ಸಹ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದಃ ಇಲ್ಲ**

**ಮರು ವಿಚಾರಣೆಃ ಇಲ್ಲ**

ಉಕ್ತ ಲೇಖನದಂತೆ ಮುಕ್ತ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

**ಓ ಹೆ ಕೇ ಸ ಇ**

ಸಹಿ/–

**ಪ್ರಧಾನ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆ.ಎಂ.ಎಫ್.ಸಿ**
**ಸಕಲೇಶಪುರ**